ವಾರದ ಪತ್ರ

## ‘ಸುಧಾ’ ಕಂಡ ಖುಷಿ



ಕಲರ್ಸ್ ಕನ್ನಡದ ‘ಶಾಂತಂ ಪಾಪಂ’ ಕಥೆಯನ್ನು ಭಿನ್ನ ರೀತಿಯಲ್ಲಿ ನಿರೂಪಿಸುತ್ತದೆ. ಅದು ಸಮಾಜದಲ್ಲಿ ಹೆಚ್ಚುತ್ತಿರುವ ಕ್ರೌರ್ಯ ಮತ್ತು ಅಪರಾಧ ಕೃತ್ಯಗಳ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದೆ. ಆ ಕಾರ್ಯಕ್ರಮದ ಸಂಚಿಕೆಯೊಂದರಲ್ಲಿ ‘ಸುಧಾ’ ವಾರಪತ್ರಿಕೆಯನ್ನು ಓದುವ ಸನ್ನಿವೇಶ ನೋಡಿ ಮನಸ್ಸಿಗೆ ಮುದ ನೀಡಿತು. ನಮ್ಮ ಪತ್ರಿಕೆಯ ‘ಜಾಣರ ಪೆಟ್ಟಿಗೆ’ಯನ್ನು ಟೀವಿ ನಿರ್ಮಾಪಕ ವರ್ಗವೂ ಗಮನಿಸುತ್ತಿದೆ ಎನ್ನುವುದು ಸ್ಪಷ್ಟವಾಯಿತು.

—ಆಶಾ ಅಪ್ರಮೇಯ, ದಾವಣಗೆರೆ

## ಮುಗಿಯಿತೇ ಬೃಂದಾವನ ಕಥೆ

ಕಲರ್ಸ್ ಕನ್ನಡದ ‘ಬೃಂದಾವನ’ ಏಕಾಏಕಿ ಗಂಟುಮೂಟೆ ಕಟ್ಟಿದ್ದು ಅಚ್ಚರಿಯನ್ನು ಮೂಡಿಸಿದೆ. ದೊಡ್ಡ ಅವಿಭಕ್ತ ಕುಟುಂಬವನ್ನೇ ಪ್ರಧಾನವಾಗಿ ಇಟ್ಟುಕೊಂಡ ಕಥೆಯನ್ನು ಹೇಳುವ ಉದ್ದೇಶವನ್ನು ದೊಡ್ಡ ಜಾಹೀರಾತು ನೀಡಿ ಪ್ರಚಾರ ಮಾಡಲಾಗಿತ್ತು. ಆ ಜಾಹೀರಾತಿನಷ್ಟೂ ಸೌಂಡ್ ಮಾಡದೆ ಧಾರಾವಾಹಿ ಮುಗಿದಿದ್ದು ವೀಕ್ಷಕರಾದ ನಮಗೆ ಬೇಸರವನ್ನು ಮೂಡಿಸಿದೆ.

ಅನೇಕ ಧಾರಾವಾಹಿಗಳನ್ನು ವರ್ಷಗಟ್ಟಲೇ ನೀಡಿರುವ ರಾಮ್‌ಜೀ ಅವರು 170 ಕಂತುಗಳಿಗೆ ಮೆಗಾ ಧಾರಾವಾಹಿಯೊಂದನ್ನು ಮುಗಿಸಿದ್ದು ಇದೇ ಮೊದಲು ಎಂದು ಅನ್ನಿಸುತ್ತದೆ. 36 ಪಾತ್ರಗಳ ಕಥನವನ್ನು ನಿರೂಪಿಸುವ ಸವಾಲನ್ನು ಎದುರಿಸುವಲ್ಲಿ ಈ ತಂಡ ವಿಫಲವಾಯಿತೆ? ಸಮಕಾಲೀನ ಸಂದರ್ಭದಲ್ಲಿ ಇಂತಹ ಕುಟುಂಬವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಇಂತಹ ಸಂದರ್ಭದಲ್ಲಿ ಏನೋ ಮಾಡುತ್ತಿದ್ದಾರೆ ಎನ್ನುವಾಗಲೇ ಮುಗಿಸಿದ್ದಾರೆ. ಅಂದರೆ ಹೊಸ ಸವಾಲನ್ನು ಇಟ್ಟುಕೊಂಡು ಸೌಹಾರ್ದ ಕಥೆಯನ್ನು ಸಮಕಾಲೀನ ಟೀವಿ ಜಗತ್ತಿನಲ್ಲಿ ನೀಡಲು ಸಾಧ್ಯ ಇಲ್ಲ ಎನ್ನುವ ಪಾಠವನ್ನು ‘ಬೃಂದಾವನ’ ಹೇಳುತ್ತಿದೆಯೇ?

—ಸುಮಾ, ಮಂಡ್ಯ

## ಭಾಷಾ ಪ್ರಯೋಗ ತಪ್ಪಿಲ್ಲದೆ ಇರಲಿ

‘ಸರಕಾರಿ ಹಿರಿಯ ಪ್ರಾರ್ಥಮಿಕ ಶಾಲೆ’ ಎಂಬ ವಾಕ್ಯ ಝೀ ಕನ್ನಡದ ‘ಮಹಾನಟಿ’ ಕಾರ್ಯಕ್ರಮದಲ್ಲಿ ಕಾಣಿಸಿತು. ‘ಅಧ್ಯಕ್ಷ’ ಸಿನಿಮಾದ ದೃಶ್ಯವೊಂದನ್ನು ಸ್ಪರ್ಧಿ ಆಶಿಕಾ ನಟಿಸಿ ತೋರಿಸಿದಾಗ ಶಾಲೆಯ ತರಗತಿಯ ಫಲಕದಲ್ಲಿ ಹೀಗೆ ಬರೆಯಲಾಗಿತ್ತು.

ಪ್ರಾಥಮಿಕ ಶಾಲೆಯ ಬೋರ್ಡ್‌ನಲ್ಲಿ ‘ಪ್ರಾಥಮಿಕ’ ಪದದ ಅಕ್ಷರಗಳನ್ನೇ ತಪ್ಪಾಗಿ ಬರೆದರೆ ಹೇಗೆ? ವಿದ್ಯಾರ್ಥಿಗಳ ಭವಿಷ್ಯ ಏನಾದೀತು? ಇಂತಹ ಅಧ್ವಾನವನ್ನು ವೀಕ್ಷಿಸುವ ಕನ್ನಡಿಗರ ಪಾಡೇನು? ಭಾಷೆಯ ಸರಿಯಾದ ರೂಪದ ಬಳಕೆಗೆ ಸಂಬಂಧಿಸಿದಂತೆ ಪರಿಶೋಧನಾ ಪ್ರಕ್ರಿಯೆ ಇರಬೇಕು. ಕನ್ನಡ ಕಾರ್ಯಕ್ರಮ ಅಥವಾ ಧಾರಾವಾಹಿಗಳನ್ನು ಪ್ರದರ್ಶಿಸುವ ಮೊದಲು ಕನ್ನಡ ಸರಿಯಾಗಿದೆಯೇ ಎಂದು ನೋಡುವುದು ಅವಶ್ಯವಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಖುಷಿಕೊಟ್ಟ ವಿಶಿಷ್ಟ ಬರ್ತ್‌ಡೇ



ಸ್ಟಾರ್ ಸುವರ್ಣದ ‘ಸೂಪರ್ ಸ್ಟಾರ್’ ರಿಯಾಲಿಟಿ ಶೋನಲ್ಲಿ ನಿರೂಪಕಿ ಶಾಲಿನಿಯವರ ಹುಟ್ಟುಹಬ್ಬದ ಸಂಭ್ರಮವನ್ನು ಬಹಳ ವಿಶಿಷ್ಟವಾಗಿ ಆಚರಿಸಲಾಯಿತು. ಅವರ ಕುಟುಂಬದ ಸದಸ್ಯರು ಆ ದಿನ ಶೋನಲ್ಲಿ ಭಾಗವಹಿಸಿದ್ದರು. ಮನೆಯಿಂದ ತಂದಿದ್ದ ದೇಸಿ ಖಾದ್ಯಗಳನ್ನು ಶಾಲಿನಿಯವರು ತಿಂದು ಖುಷಿಪಟ್ಟರು. ಅವರ ಇಬ್ಬರು ಸಹೋದರರು ಕೊಳಲು ಹಾಗೂ ವಯೊಲಿನ್ ಸುಮಧುರವಾಗಿ ನುಡಿಸಿದ್ದು ನಿಜಕ್ಕೂ ಖುಷಿ ನೀಡಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಥಟ್! ನಿಯಮ ಬದಲಿಸಿ...

ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮ ನಮ್ಮ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಲು ಸಹಕಾರಿಯಾಗುತ್ತಿದೆ. ಅದರಲ್ಲಿ ಪ್ರಶ್ನೆಗಳಿಗೆ ಆಯ್ಕೆಗಳು ಬರುವ ಮೊದಲೇ ಕೆಲವು ಸ್ಪರ್ಧಿಗಳು ಉತ್ತರ ಗೊತ್ತಿರದಿದ್ದರೂ ಅವಸರದಲ್ಲಿ ಬಝರ್ ಒತ್ತುತ್ತಾರೆ. ಇದರಿಂದ ಉತ್ತರ ಗೊತ್ತಿರುವ ಸ್ಪರ್ಧಿಗಳಿಗೆ ಅನ್ಯಾಯವಾಗುತ್ತಿದೆ. ಇದರ ಬದಲು ಆಯ್ಕೆಗಳು ಬಂದ ಬಳಿಕವೇ ಬಝರ್ ಒತ್ತುವಂತೆ ನಿಯಮ ಬದಲಿಸಬೇಕು. ಹಾಗೆಯೇ, ಮೊದಲು ಸರಿ ಉತ್ತರ ಹೇಳಿದರೆ ಅವರಿಗೆ ಹತ್ತು ಅಂಕ, ಎರಡನೆಯವರಾಗಿ ಹೇಳಿದರೆ ಐದು ಅಂಕ, ಮೂರನೆಯವರಾಗಿ ಹೇಳಿದರೆ ಮೂರು ಅಂಕಗಳನ್ನು ನೀಡುವ ಕ್ರಮವನ್ನು ಶುರು ಮಾಡಬಹುದು. ಇದರಿಂದ ಬೇರೆಯವರ ಗಡಿಬಿಡಿಯಿಂದ ಉತ್ತರಿಸುವ ಅವಕಾಶ ಕಳೆದುಕೊಳ್ಳುವವರಿಗೆ ನ್ಯಾಯ ದೊರಕಬಹುದು.

—ಬಿ.ಎನ್. ಭರತ್, ಬೆಂಗಳೂರು

## ಚಂದನದ ಚಂದದ ಕೊಡುಗೆ

ಇತ್ತೀಚೆಗೆ ‘ಥಟ್ ಅಂತಾ ಹೇಳಿ’ಯಲ್ಲಿ ಹೊಸ ಮಾದರಿಯನ್ನು ಪರಿಚಯಿಸುತ್ತಿದ್ದಾರೆ. ಶುಕ್ರವಾರದ ಅಪ್ಪಟ ಕನ್ನಡದ ಸಂಚಿಕೆ ನಿಜಕ್ಕೂ ಒಂದು ವಿಶಿಷ್ಟ ಪ್ರಯೋಗ. ನಾಡು, ನುಡಿ, ಸಂಸ್ಕೃತಿಗೆ ಸಂಬಂಧಿಸಿದಂತೆ ವಿಶೇಷ ಸಂಚಿಕೆಯನ್ನು ಅದು ಒಳಗೊಂಡಿತ್ತು. ವರ್ಣಮಾಲೆಯಿಂದ ಹಿಡಿದು ಪದ–ವಾಕ್ಯಗಳ ರಚನೆಯ ಬಗ್ಗೆ ಕೇಳುವುದು ಸೊಗಸಾಗಿರುತ್ತದೆ. ಅದರಲ್ಲೂ ಒಂದು ವಾಕ್ಯವನ್ನು ಓದಿ ಎಂದು ಕೇಳುವ ಪರಿಯೇ ವಿಶೇಷ. ಚಂದನದ ಹೆಮ್ಮೆಯಂತಿರುವ ಈ ಕಾರ್ಯಕ್ರಮ ಕನ್ನಡಿಗರಿಗೆ ಚಂದದ ಕೊಡುಗೆಯೇ ಸರಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಅತಿಯಾಯ್ತು ಸುಬ್ರಹ್ಮಣ್ಯನ ಧಾರಾಳತನ

ಝೀ ಕನ್ನಡದ ‘ಶ್ರಾವಣಿ ಸುಬ್ರಹ್ಮಣ್ಯ’ ಧಾರಾವಾಹಿಯಲ್ಲಿ ಕೆಲವು ಆಭಾಸಗಳಿದ್ದರೂ ಏನೋ ತಕ್ಕಮಟ್ಟಿಗೆ ನಡೆದುಕೊಂಡು ಹೋಗುತ್ತಿದೆ. ಬೇರೊಂದು ಧಾರಾವಾಹಿಯಲ್ಲಿ ಬೀಗರ ಮನೆಗೇ ದಾಂಗುಡಿ ಇಡುವಂತೆ ಇಲ್ಲೂ ಸಹ ಬೀಗ್ತಿ (ಅಳಿಯನ ತಾಯಿ) ಬಂದು ಠಿಕಾಣಿ ಹಾಕಿದ್ದಾಳೆ. ಅವಳ ಪಾತ್ರ ಸಹಿಸಲಸಾಧ್ಯ. ದಯವಿಟ್ಟು ಆದಷ್ಟು ಬೇಗ ಆ ಪಾತ್ರ ಮುಗಿಸಿ. ಸುಬ್ರಹ್ಮಣ್ಯನ ಧಾರಾಳತನ ಜಾಸ್ತಿಯಾಯಿತು.

—ಅರುಣ್ ಕೆ.ಎನ್., ಬೆಂಗಳೂರು